# CHAPTER -7

**ಈ ಕೆಳಗಿನ ಪ್ರತಿ ಪ್ರಶ್ನೆಗೆ ನೀಡಿದ ನಾಲ್ಕು ಆಯ್ಕೆಗಳಲ್ಲಿ ಸರಿಯಾದ ಉತ್ತರವನ್ನು ಆಯ್ಕೆ ಮಾಡಿರಿ.**

1. ಒಂದು ನರಕೋಶದಿಂದ ಇನ್ನೊಂದು ನರಕೋಶಕ್ಕೆ ವಿದ್ಯುತ್‌ನ ಆವೇಗವು ಈ ದಿಕ್ಕಿನಲ್ಲಿ ಸಾಗುತ್ತದೆ.

   A) ಒಂದರ ಆಕ್ಸಾನ್ ತುದಿಯಿಂದ ಇನ್ನೊಂದರ ಕೋಶಕಾಯದ (ಡೆಂಡ್ರೈಟ್) ಕಡೆ

   B) ಒಂದರ ಕೋಶಕಾಯದಿಂದ (ಡೆಂಡ್ರೈಟ್) ಇನ್ನೊಂದರ ಆಕ್ಸಾನ್ ಕಡೆ

   C) ಒಂದರ ಆಕ್ಸಾನ್ ತುದಿಯಿಂದ ಇನ್ನೊಂದರ ಆಕ್ಸಾನ್ ಕಡೆ

   D) ಒಂದರ ಕೋಶಕಾಯದ ತುದಿಯಿಂದ ಇನ್ನೊಂದರ ಕೋಶಕಾಯದ ಕಡೆ

2. ನಮ್ಮ ದೇಹದ ಸಮತೋಲನವನ್ನು ಕಾಪಾಡಲು ಕಾರಣವಾದ ಮೆದುಳಿನ ಭಾಗ

   A) ಮೆಡುಲ್ಲಾ B) ಮಹಾಮಸ್ತಿಷ್ಕ C) ಅನುಮಸ್ತಿಷ್ಕ D) ಮಧ್ಯಮೆದುಳು

3. ಒಂದು ಸಸ್ಯದ ಬೆಳವಣಿಗೆ ಕುಂಠಿತವಾಗಿದ್ದು, ಎಲೆಗಳು ಬಾಡಿವೆ. ಹಾಗಾದರೆ ಸಸ್ಯದ ಈ ವಿದ್ಯಮಾನಕ್ಕೆ ಬಹುಶ: ಕಾರಣವಾದ ಸಸ್ಯ ಹಾರ್ಮೋನ್ ಎಂದರೆ

   A) ಜಿಬ್ಬರ್ಲಿನ್ B) ಆಕ್ಸಿನ್ C) ಅಬ್ಸಿಸಿಕ್ ಆಮ್ಲ D) ಸೈಟೋಕೈನಿನ್

4. ಒಬ್ಬ ವಿದ್ಯಾರ್ಥಿನಿ ತೋಟದಲ್ಲಿ ಚೇಳನ್ನು ನೋಡಿ ಭಯಭೀತಳಾಗಿದ್ದಾಳೆ. ಈ ಸನ್ನಿವೇಶದಿಂದ ಅವಳ ದೇಹ ಸಾಮಾನ್ಯ ಸ್ಥಿತಿಗೆ ಬರಲು ಸಹಾಯಕವಾಗಬಹುದಾದ ದೇಹದ ಹಾರ್ಮೋನ್ ಎಂದರೆ

   A) ಥೈರಾಕ್ಸಿನ್ B) ಅಡ್ರಿನಲಿನ್ C) ಟೆಸ್ಟೋಸ್ಟಿರಾನ್ D) ಪ್ರೊಜೆಸ್ಟಿರಾನ್

5. ಒಬ್ಬ ವಿದ್ಯಾರ್ಥಿನಿಯ ಗಂಟಲು ಊದಿಕೊಂಡಿದೆ. ಅವಳ ಗಂಟಲು ಸಾಮಾನ್ಯ ಸ್ಥಿತಿಗೆ ಬರಬೇಕಾದರೆ ಆ ವಿದ್ಯಾರ್ಥಿನಿ ಆಹಾರದಲ್ಲಿ ಈ ಕೆಳಗಿನ ಯಾವ ಅಂಶವನ್ನು ಸೇವಿಸಬೇಕು.

   A) ಪ್ರೋಟೀನ್ B) ಲಿಪಿಡ್ C) ಅಯೋಡಿನ್ D) ಕಬ್ಬಿಣ

6. ವಯಸ್ಕ ಗಂಡಸರ ಲಕ್ಷಣಗಳಿಗೆ ಈ ಕೆಳಗಿನ ಯಾವ ಹಾರ್ಮೋನ್ ಕಾರಣವಾಗಿದೆ.

   A) ಥೈರಾಕ್ಸಿನ್ B) ಅಡ್ರಿನಲಿನ್ C) ಟೆಸ್ಟೋಸ್ಟಿರಾನ್ D) ಪ್ರೊಜೆಸ್ಟಿರಾನ್

7. ಪರಾವರ್ತಿತ ಪ್ರತಿಕ್ರಿಯೆಗೆ ಕಾರಣವಾದ ಅಂಗ ಎಂದರೆ

   A) ಮೆದುಳು ಬಳ್ಳಿ B) ಮೆದುಳು C) ನರಕೋಶ D) ಮಹಾಮಸ್ತಿಷ್ಕ

8. ಈ ಕೆಳಗಿನ ಸಸ್ಯದ ಯಾವ ಚಲನೆಯು ಯಾವುದೇ ಬೆಳವಣಿಗೆಯನ್ನು ಒಳಗೊಂಡಿಲ್ಲ.

   A) ಗುಲಾಬಿ ಸಸ್ಯ B) ವೆನಿಲ್ಲಾ C) ಮುಟ್ಟಿದರೆ ಮುನಿ D) ಮಲ್ಲಿಗೆ ಸಸ್ಯ

9. ಮೇದೋಜೀರಕ ಗ್ರಂಥಿಯಿಂದ ಸ್ರವಿಸಲ್ಪಡುವ ಈ ಹಾರ್ಮೋನ್‌ನಿಂದ ಈ ಕಾಯಿಲೆಯನ್ನು ನಿಯಂತ್ರಿಸಬಹುದಾಗಿದೆ.

   A) ಮಧುಮೇಹ B) ಇರುಳು ಕುರುಡು C) ರಕ್ತಹೀನತೆ D) ಗಳಗಂಡ

10. ಸೂರ್ಯಕಾಂತಿ ಹೂ ಸೂರ್ಯನ ಕಡೆ ಮುಖ ಮಾಡಿ ಬೆಳೆಯಲು ಪ್ರಮುಖ ಕಾರಣ ಎಂದರೆ

    A) ಜಲಾನುವರ್ತನೆ B) ದ್ಯುತಿ ಅನುವರ್ತನೆ C) ಗುರುತ್ವ ಅನುವರ್ತನೆ D) ರಾಸಾಯನಿಕ ಅನುವರ್ತನೆ

LIVEWORKSHEETS